ಹೇಳಿ ಫಲಾನುಭವಿಗಳಿಗೆ ವಿತರಿಸಿದ ಹಕ್ಕು ಪತ್ರಗಳನ್ನು ಮರಳಿ ಪಡೆದಿದ್ದಾನೆ. ಇಂತಹ ಅಕ್ರಮವೆಸಗಿದ ಅಧಿಕಾರಿಯನ್ನು ತಕ್ಷಣ ಅಮಾನತ್ತಿನಲ್ಲಿಟ್ಟು ವಿಚಾರಣೆ ಮಾಡಬೇಕೆಂದು ಒತ್ತಾಯಿಸುತ್ತೇನೆ.

ಶ್ರೀ ಬಿ.ಶಿವಣ್ಣ: (ಸಮಾಜ ಕಲ್ಯಾಣ ಸಚಿವರು):- ಮಾನ್ಯ ಅಧ್ಯಕ್ಷರೆ, ಮಾನ್ಯ ಕಂದಾಯ ಸಚಿವರ ಪರವಾಗಿ ಈ ಹೇಳಿಕೆಯನ್ನು ಮಾಡುತ್ತೇನೆ. ಬಿಜಾಪುರ ಜಿಲ್ಲೆ ಮುಧೋಳ ತಾಲೋಕು ತಹಶೀಲ್ದಾರ್‌ರವರು ಆಶ್ರಯ ಯೋಜನೆಯಡಿಯಲ್ಲಿ ಫಲಾನುಭವಿಗಳಿಗೆ ಹಕ್ಕುಪತ್ರ ವಿತರಣೆ ಮಾಡುವ ಬಗ್ಗೆ ಅಕ್ರಮವೆಸಗಿದ್ದಾರೆಂಬ ದೂರನ್ನು ಶಾಸಕರಾದ ಡಾ.ತಿಮ್ಮಾಪುರ ಮತ್ತು ಆರ್.ಬಿ.ಚೌದರಿ ಇವರುಗಳು ಮಾಡಿರುತ್ತಾರೆ. ಇದರ ಬಗ್ಗೆ ವಿಚಾರಿಸಲಾಗಿ, ಈ ಆಪಾದನೆ ಸತ್ಯಕ್ಕೆ ದೂರವೆಂದು ಕಂಡುಬಂದಿದೆ. ಈ ಆಶ್ರಯ ಯೋಜನೆಯ ಸಮಿತಿಯಲ್ಲಿಅಲ್ಲಿನ ಶಾಸಕರು ಅಧ್ಯಕ್ಷರಿರುತ್ತಾರೆ. ಇದರಿಂದಲೂ ಸಹ ಈ ಆರೋಪದ ಬಗ್ಗೆ ದೂರು ಬಂದಿರುವುದಿಲ್ಲ. ಈ ಆಶ್ರಯ ಯೋಜನೆಯಡಿಯಲ್ಲಿ ಫಲಾನುಬವಿಗಳ ಆಯ್ಕೆ ಮತ್ತು ಹಕ್ಕುಪತ್ರ ನೀಡುವ ಅಧಿಕಾರ ಸಮಿತಿಗೆ ಮಾತ್ರ ಇದ ಆದುದರಿಂದ ತಹಶಿಲ್ದಾರರ ಕೈವಾಡ ಇಲ್ಲವೆಂದು ಮೇಲ್ನೋಟಕ್ಕೆ ಕಂಡು ಬಂದಿದೆ ಆಶ್ರಯ ಸಮಿತಿಯವರು ನಿರ್ಣಯಿಸಿ ಫಲಾನುಭವಿಗಳಿಗೆ ಹಕ್ಕು ಪತ್ರ ನೀಡಿದ್ದು, ಆ ಪ್ರಕಾರವೇ ಮುಧೋಳ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳು ಯಾದಿ ಮತ್ತು ನಕ್ಷೆಯನ್ನು ತಯಾರಿಸಿರುತ್ತಾರೆ.

5. ಬೆಂಗಳೂರು ವಿಶ್ವವಿದ್ಯಾನಿಲಯದ ಘಟಿಕೋತ್ಸವದಲ್ಲಿ ಪಾಲ್ಗೊಳ್ಳದ ಪದವೀಧರರು ಪದವಿ ಪ್ರಮಾಣ ಪತ್ರ ಪಡೆಯಲು ನೀಡುವ ಶುಲ್ಕದ ಬಗ್ಗೆ

ಶ್ರೀ ಎ.ಕೆ.ಅನಂತಕೃಷ್ಣ:(ಶಿವಾಜಿನಗರ):- ಮಾನ್ಯ ಅಧ್ಯಕ್ಷರೆ, ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಪದವಿ ಪ್ರಮಾಣ ಪತ್ರ ಪಡೆದು ಕೊಳ್ಳಲು ಘಟಿಕೋತ್ಸವದಲ್ಲಿ ಪಾಲ್ಗೊಳ್ಳುವವರಿಗೆ 45 ರೂಪಾಯಿಗಳ ಶುಲ್ಕವನ್ನು ವಿಧಿಸಿದ್ದು, ಪಾಲ್ಗೊಳ್ಳದವರಿಗೆ 55 ರೂಪಾಯಿಗಳ ಶುಲ್ಕವನ್ನು ವಿಧಿಸಲಾಗಿತ್ತು. ಈವರೆವಿಗೂ ಘಟಿಕೋತ್ಸವದಲ್ಲಿ ಪಾಲ್ಗೊಳ್ಳದಿರುವವರಿಗೆ ಪದವಿ ಪ್ರಮಾಣ ಪತ್ರಗಳನು ಅಂಚೆ ಮೂಲಕ ರಿಜಿಸ್ಟರ್ಡ್ ಮೂಲಕ ಕಳುಹಿಸಲಾಗುತ್ತಿತ್ತು. ಅದಕ್ಕೆಂದೇ 10 ರೂಪಾಯಿಗಳನ್ನು ಅಭ್ಯರ್ಥಿಗಳಿಂದ ಹೆಚ್ಚಿಗೆ ವಸೂಲು ಮಾಡಲಾಗುತ್ತಿತ್ತು. ಈ ಬಾರಿ ವಿಶ್ವವಿದ್ಯಾನಿಲಯದ ಅಧಿಕಾರಿಗಳು ಅತಿ ಬುದ್ಧಿವಂತಿಕೆಯನ್ನು ಉಪಯೋಗಿಸಿ 10 ರೂಪಾಯಿಗಳನ್ನು ವಿಶ್ವವಿದ್ಯಾನಿಲಯಕ್ಕೆ ಉಳಿಸುವಯೋಜನೆಯನ್ನು ಹಾಕಿಕೊಂಡಿದ್ದು ಸದರಿ ಪ್ರಮಾಣ ಪತ್ರಗಳನ್ನು ಸಂಬಂಧಪಟ್ಟ ಆಯಾಯ ಕಾಲೇಜುಗಳಿಗೆ ಕಳುಹಿಸಲಾಗುವುದೆಂದು ಹೇಳುತ್ತಿದ್ದಾರೆ. ಇದಕ್ಕಾಗಿ ಹತ್ತು ರೂಪಾಯಿಗಳನ್ನು ಅಭ್ಯರ್ಥಿಗಳಿಂದ ಪಡೆದುಕೊಳ್ಳುವ ಅವಶ್ಯಕತೆ ಏನಿತ್ತು ? ಆದ್ದರಿಂದ ಸಂಬಂಧಪಟ್ಟ ಕಾಲೇಜುಗಳ ಮೂಲಕವೇ ಅಭ್ಯರ್ಥಿಗಳು ಪ್ರಮಾಣಪತ್ರಗಳನ್ನು ಪಡೆದುಕೊಳ್ಳಬೇಕಾಗಿದ್ದಲ್ಲಿ ವಿಶ್ವ ವಿದ್ಯಾನಿಲಯದವರು ಅವರು ಪಡೆದುಕೊಂಡಿರುವ ಹತ್ತು ರೂಪಾಯಿಗಳನ್ನು ಸಂಬಂಧಪಟ್ಟ ಅಭ್ಯರ್ಥಿಗಳಿಗೆ ಹಿಂತಿರುಗಿಸಬೇಕು. ಇಲ್ಲವಾದಲ್ಲಿ ರಿಜಿಸ್ಟರ್ಡ್ ಅಂಚೆ ಮೂಲಕ ಹಿಂದೆ ಕಳುಹಿಸುತ್ತಿದ್ದ ರೀತಿಯಲ್ಲಿಯೇ ಅಭ್ಯರ್ಥಿಗಳಿಗೆ ಪ್ರಮಾಣ ಪತ್ರಗಳನ್ನು ಕಳುಹಿಸಿಕೊಡಬೇಕೆಂದು ವಿಶ್ವ ವಿದ್ಯಾನಿಲಯದ ಕುಲಪತಿಗಳಿಗೆ ಆದೇಶ ನೀಡಬೇಕೆಂದು ಮಾನ್ಯ ಶಿಕ್ಷಣ ಸಚಿವರನ್ನು ಒತ್ತಾಯಿಸುತ್ತೇನೆ.

ಶ್ರೀ ಕೆ.ಜೆ.ಜಾರ್ಜ್: (ವಸತಿ ಹಾಗೂ ನಗರಾಭಿವೃದ್ಧಿ ಸಚಿವರು) :- ಮಾನ್ಯ ಅಧ್ಯಕ್ಷರೇ,

ಶಿಕ್ಷಣ ಸಚಿವರ ಪರವಾಗಿ ಈ ಹೇಳಿಕೆಯನ್ನು ಮಾಡುತ್ತೇನೆ.

ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಪದವಿ ಪ್ರಮಾಣ ಪತ್ರ ಪಡೆದುಕೊಳ್ಳಲು ಘಟಿಕೋತ್ಸವದಲ್ಲಿ ಪಾಲ್ಗೊಳ್ಳುವವರಿಗೆ ರೂ 45.00 ಗಳನ್ನು ವಿಧಿಸಲಾಗುತ್ತಿದೆ. ಘಟಿಕೋತ್ಸವದಲ್ಲಿ ಪಾಲ್ಗೊಳ್ಳದೇ ಇರುವುದರಿಂದ ರೂ70.00 ಶುಲ್ಕವನ್ನು ವಿಧಿಸಲಾಗುತ್ತಿದೆ. ಈ ರೂ. 70.00 ಗಳಲ್ಲಿ 15-00 ರೂಪಾಯಿಗಳನ್ನು ರಿಜಿಸ್ಟ್ರಾರ್ಡ್ ಅಂಚೆ ಮೂಲಕ ಪದವಿ ಪ್ರಮಾಣ ಪತ್ರವನ್ನು ಸಂಬಂಧಪಟ್ಟ ವಿದ್ಯಾರ್ಥಿಗೆ ಕಳುಹಿಸುವುದಕ್ಕೆ ಉಪಯೋಗಿಸಲಾಗುತ್ತಿದೆ.

ಅಂಚೆ ರಿಜಿಸ್ಟರ್ಡ್ ಮೂಲಕ ಕಳುಹಿಸಿದ ಪದವಿ ಪ್ರಮಾಣ ಪತ್ರಗಳಲ್ಲಿ ಸುಮಾರು ಶೇಕಡ 50 ರಷ್ಟು ವಾಪಸ್ಸು ಬಂದಿದ್ದು ವಿದ್ಯಾರ್ಥಿಗಳಿಗೆ ಇದರಿಂದ ತೊಂದರೆ ಉಂಟಾಗಿರುವುದನ್ನು ಗಮನಿಸಿ ವಿಶ್ವವಿದ್ಯಾನಿಲಯವು ಸಂಬಂಧಪಟ್ಟ ಆಯಾ ಕಾಲೇಜುಗಳ ಮುಖಾಂತರ ಪದವಿ ಪ್ರಮಾಣ ಪತ್ರ ವಿದ್ಯಾರ್ಥಿಗಳಿಗೆ ತಲುಪಿಸಲು ಏರ್ಪಾಟು ಮಾಡಲಾಗಿದೆ. ಈ ಬಾರಿ ಘಟಿತೋತ್ಸವದಲ್ಲಿ ಪಾಲ್ಗೊಳ್ಳದವರಿಗೆ ಪದವಿ ಪ್ರಮಾಣ ಪತ್ರ ವಿತರಿಸಲುಸಂಬಂಧಪಟ್ಟ ಕಾಲೇಜುಗಳಿಗೆ ಸೂಚನೆ ನೀಡಲಾಗಿದೆ.

ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಭೆಯ ಮುಂದೆ ಈ ಸಂಬಂಧ ಪ್ರತಿ ವಿದ್ಯಾರ್ಥಿಗೆ ರೂ.15-00 ಗಳನ್ನು ಮರುಪಾವತಿ ಮಾಡುವ ಪ್ರಸ್ತಾಪವಿರುತ್ತದೆ. ಸಿಂಡಿಕೇಟ್ ಸಭೆಯ ತೀರ್ಮಾನದಂತೆ ಸಂಬಂಧಪಟ್ಟ ಪ್ರತಿ ವಿದ್ಯಾರ್ಥಿಗೆ 15-00 ರೂಪಾಯಿಗಳನ್ನು ಆಯಾ ಕಾಲೇಜುಗಳ ಮೂಲಕ ಹಿಂತಿರಿಗಿಸುವ ಏರ್ಪಾಡು ಮಾಡಲಾಗುವುದು.

6. ಗುಲ್ಬರ್ಗ ಜಿಲ್ಲೆಯ ಸೇಡಂ ತಾಲ್ಲೂಕಿನ ಇಟಕಾಲ್ ಗ್ರಾಮದಲ್ಲಿ ನಡೆದ ಕೊಲೆ.

ಶ್ರಿ ಬಸವಂತರೆಡ್ಡಿ ಮೊತಕಪಲ್ಲಿ : (ಸೇಡಂ):- ಮಾನ್ಯ ಅಧ್ಯಕ್ಷರೆ, ಗುಲಬರ್ಗ ಜಿಲ್ಲೆಯ ಸೇಡಂ ತಾಲ್ಲೂಕಿನ ಇಟಕಾಲ್ ಗ್ರಾಮದ ಭಯ ಭೀತಿ ಹೊಂದಿರುವ ನಾಗರೀಕರು ಸಾರ್ವಜನಿಕ ಹಿತದೃಷ್ಟಿಯಿಂದ ದಿನಾಂಕ :25-2-92 ರಂದು ಒಂದು ಅರ್ಜಿ ಸಲ್ಲಿಸಿ ಬಸಿರೆಡ್ಡಿ ಗವಿನೋಳ್ ಎಂಬುವರನ್ನು ದಿನಾಂಕ :22-02-92 ರಂದು ಅಮಾನುಷವಾಗಿ ಕೊಲೆ ಮಾಡಿ ಮಣ್ಣು ಮಾಡಿದರೂ ಸಹ ಸಂಬಂಧಪಟ್ಟ ಪೋಲೀಸರು ಯಾವ ಕ್ರಮ ಕೈಗೊಂಡಿಲ್ಲವೆಂದು ತಿಳಿದಿದೆ ಅಷ್ಟೆ.

ನಂತರ ದಿನಾಂಕ:2-3-1992 ರಂದು ಮೃತರ ಮೊಮ್ಮಗ ಈ ಅಮಾನುಷ ಕೊಲೆಯ ಬಗ್ಗೆ ಅರ್ಜಿ ಸಲ್ಲಿಸಿದರೂ ಸಹ ಯಾವ ಕ್ರಮವಿಲ್ಲವೆಂದು ಮಾಹಿತ ಸಿಕ್ಕಿರುವುದಕ್ಕಾಗಿ ನಾವು ಐದು ಮಂದಿ ಶಾಸಕರು ದಿನಾಂಕ6-3-92 ರಂದು ಗಮನ ಸೆಳೆಯುವ ಸೂಚನೆಯನ್ನು ಚರ್ಚೆಗಾಗಿ ಕೊಟ್ಟರೂ ಸಹ ಯಾವ ಮಾಹಿತಿ ಸಿಕ್ಕಿಲ್ಲ ಏಕೆ ? ಈ ಕೊಲೆಯ ಬಗ್ಗೆ ಸವಿಸ್ತಾರವಾಗಿ ಮಾಹಿತಿ ಎಂದರೆ, ಪ್ರಥಮ ಮಾಹಿತಿ ವರದಿ (ಎಫ್.ಆಯ್.ಆರ್) ಜಾರಿ ಮಾಡಿದ್ದು ಯಾವಾಗ ? ಭಯ ಭೀತಿ ಗೊಂಡಿರುವ ಜನರ ಅರ್ಜಿ ಮುಟ್ಟಿದ ತಕ್ಷಣವೆ ಪ್ರಥಮ ಮಾಹಿತಿ ವರದಿ ಜಾರಿ ಮಾಡಿಲ್ಲವೇಕೆ? ತಕ್ಷಣವೆ ಶವವನ್ನು ವೈದ್ಯಕೀಯ ಪರೀಕ್ಷೆಗಾಗಿ ತೆಗೆಸಿಲ್ಲವೇಕೆ ?

ಇಷ್ಟು ವಿಳಂಬ ಮಾಡಿದ್ದಕ್ಕಾಗಿ ಪೋಲೀಸ್ ಇಲಾಖೆ ಅಧಿಕಾರಿಗಳ ಕೈವಾಡವಿದೆ ಎಂಬುದು ಶಂಕೆಗೆ ಆಸ್ಪದವಾಗಿಲ್ಲವೇ ?

ಈಗಲಾದರೂ ಸಹ ತಪ್ಪಿತಸ್ಥರನ್ನು ಬಂಧಿಸಿ ಕಾನೂನು ಪ್ರಕಾರ ಕ್ರಮ ಕೈಗೊಳ್ಳಲು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರಿ ಧರ್ಮಸಿಂಗ್ : (ಗೃಹ ಸಚಿವರು):-ಮಾನ್ಯ ಅಧ್ಯಕ್ಷರೆ, ಮೃತರಾದ ಶ್ರಿ